ಮುಂಡರಗಿಯ 110 ಕೆವಿ ವಿದ್ಯುತ್ ಸಬ್‌ಸ್ಟೇಷನ್

ಚುಕ್ಕೆ ಗುರುತಿನ ಪ್ರಶ್ನ ಸಂಖ್ಯೆ 14(3)

ಸದಸ್ಯರ ಹೆಸರು ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಪಾಟೀಲ್ ಅಫ್ಜಲ್ಪೂರ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ) ಮುಂಡರಗಿ ಸಬ್ ಸ್ಟೇಷನ್ 110 ಕೆವಿ ವಿದ್ಯುತ್ ಸ್ಟೇಷನ್ ಕಾಮಗಾರಿ ಮುಗಿಯಲು ಬೇಕಾಗುವ ಅವಧಿಯೆಷ್ಟು?

ಆ) ಮುಂಡರಗಿ ತಾಲ್ಲೂಕು ಡಂಬಳ ಗ್ರಾಮದಲ್ಲಿ 110 ಕೆವಿ ವಿದ್ಯುತ್ ಸ್ಟೇಷನ್ ಕಾಮಗಾರಿ ಎಂದಿನಿಂದ ಪ್ರಾರಂಭ ಮಾಡಲಾಗುವುದು ಹಾಗೂ ಎಂದು ಮುಗಿಸಲಾಗುವುದು?

ಉತ್ತರ

ಅ) ಮುಂಡರಗಿ ಗ್ರಾಮದಲ್ಲಿ 110 ಕೆವಿ ವಿದ್ಯುತ್ ಸಬ್ ಸ್ಟೇಷನ್ ಕೆಲಸವನ್ನು ಸೆಪ್ಟೆಂಬರ್ 2002ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ

ಆ) ಮುಂಡರಗಿ ತಾಲ್ಲೂಕು ಡಂಬಳ ಗ್ರಾಮದಲ್ಲಿ 110 ಕೆವಿ ವಿದ್ಯುತ್ ಸ್ಟೇಷನ್ನಿನ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಿ ಕೊಡಬೇಕಾಗಿರುತ್ತದೆ ವಹಿಸಿಕೊಟ್ಟ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ ನಿರ್ಮಾಣ ಕಾರ್ಯವನ್ನು ಪ್ರಾರಂಬಿಸಿದ ನಂತರ ಸುಮಾರು 12 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದ

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿ ನನಗೆ ಏಂದು ಗಾದೆ ಮಾತು ಜ್ಞಾಪಕಕ್ಕೆ ಬರುತ್ತಿದೆ ಅದೇನಂದರೆ ''ಮೈಲಾರ್‌ಲಿಂಗವ್ವನ ಕಾರಣಿಕ, ಆಕಾಶಕ್ಕೆ ಸಿಡ್ಲು ಬಡಿತು ಪರಾಕ್' ಏನಾದರೂ ತಿಳಿದುಕೊಳ್ಳಿ ಮಳೆಯಾದರೂ ಹಚ್ಚಿಕೊಳ್ಳಿ ಮಳೆ ಹೋದರೂ ಹಚ್ಚಿಕೊಳ್ಳಿ ಎನ್ನತಕ್ಕಂಥ ರೀತಿಯಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ನಾನು ಕೇಳಿರತಕ್ಕಂಥ ಎರಡು ಪ್ರಶ್ನೆಗಳಿಗೆ ಸಂಬಂಧವಪಟ್ಟಂತೆ ಮಾನ್ಯ ಸಚಿವರು ಉತ್ತರ ಒದಗಿಸಿಕೊಟ್ಟಿದ್ದಾರೆ ಆದರ ಸದರಿ ಕಲಸಕ್ಕಾಗಿ ಅಡಿಗಲ್ಲು ಹಾಕಿ ಸುಮಾರು ನಾಲ್ಕು ವರ್ಷವಾಗಿದೆ ಇದಕ್ಕೆ ಸಂಬಂಧವಪಟ್ಟಂತೆ ಮಾನ್ಯ ಸಚಿವರು ಕೊಟ್ಟರತಕ್ಕಂಥ ಉತ್ತರದ ಪ್ರಕಾರ, ಮುಂಡರಗಿ

ಗ್ರಾಮದಲ್ಲಿ ವಿದ್ಯುತ್ ಸಬ್ ಸ್ಟೇಷನ್ ಪ್ರಾರಂಭ ಮಾಡಿ ಮೂರ್ನಾಲ್ಕು ವರ್ಷಗಳಾಗಿದ್ದು, ಇನ್ನು 12 ತಿಂಗಳಲ್ಲಿ ಮುಗಿಸಲಾಗುತ್ತಿದೆ ಎನ್ನತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ ಆದರೆ ಇವತ್ತಿನವರೆಗೂ ಕೂಡ ಕೆಲಸ ಪ್ರಾರಂಭವಾಗಿಲ್ಲ ಈಗಾಗಲೇ ರೈತರಿಗೆ 6 ಗಂಟೆಗಳವರೆಗೆ ವಿದ್ಯುತ್ ಕೊಡುತ್ತೇವಂದು ಹೇಳಿ, ಈಗ ಮೂರು ಗಂಟೆಯವರೆಗೆ ಮಾತ್ರ ಕೊಡಲಾಗುತ್ತಿದೆ ಈಗಾಗಲೇ ವೋಲ್ಟೇಜ್‌ನ ವ್ಯತ್ಯಾಸದಿಂದ ರೈತರಿಗೆ ಸಾಕಷ್ಟು ತೊಂದರೆಯಾಗಿರತಕ್ಕಂಥದ್ದು ತಮ್ಮ ಗಮನಕ್ಕೂ ಕೂಡ ಬಂದಿದೆ ಆದ್ದರಿಂದ ಸದರಿ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಿ ಯಾವಾಗ ಮುಗಿಸಲಾಗುತ್ತದೆ ಎನ್ನತಕ್ಕಂಥದ್ದನ್ನು ನಿರ್ದಿಷ್ಟವಾಗಿ ಹೇಳಬೇಕು

ಶ್ರೀ ವೀರಕುಮಾರ್ ಪಾಟೀಲ್ ಅಪ್ಪಾನ್ಲೋ ಮಾನ್ಯ ಅಧ್ಯಕ್ಷರೆ, ಮುಂಡರಗಿ ಗ್ರಾಮದಲ್ಲಿ 110 ಕೆ ವಿ ವಿದ್ಯುತ್ ಸಬ್ ಸ್ಟೇಷನ್ 1ನೇ ನವೆಂಬರ್ 2003ರೊಳಗೆ ಮುಗಿಸಲಾಗುತ್ತದೆ ಹಾಗೆಯೇ ಡಂಬಳ ಗ್ರಾಮದಲ್ಲಿ 110 ಕೆ ವಿ ವಿದ್ಯುತ್ ಸ್ಟೇಷನ್ ಮಾರ್ಚ್ 2003ನೇ ಇಸವಿಯೊಳಗೆ ಮುಗಿಸಲಾಗುತ್ತದೆ

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ ನಾನು ಸ್ವಲ್ಪ ಗಟ್ಟಿಯಾಗಿ ಕೇಳಿದ್ದಕ್ಕೆ ಸ್ವಲ್ಪ ಮುಂದೆ ಹೋಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಮಾರ್ಚ್ 2003ನೇ ಇಸವಿಯೊಳಗೆ ಮುಗಿಸಲಾಗುತ್ತದೆ ಎಂದು ಹೇಳುತ್ತಿದ್ದಾರೆ ಆದರೆ ಇದಕ್ಕೆ ಸಂಬಂಧವಟ್ಟಂತೆ ಟೆಂಡರ್ ಕರೆದು ಸದರಿ ಕೆಲಸವನ್ನು ಇನ್ನೂ ಯಾರಿಗೂ ಕೂಡ ವಹಿಸಿಕೊಟ್ಟಿಲ್ಲ ಮಾನ್ಯ ಸಚಿವರು ಒದಗಿಸಿಕೊಟ್ಟರತಕ್ಕಂಥ ಉತ್ತರದಲ್ಲಿ ಅದು ಇದು, ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆಯೇ ಹೊರತು ಇನ್ನು ಯಾವುದನ್ನೂ ಕೂಡ ಮಾಡುವುದಕ್ಕೆ ಹೋಗಿಲ್ಲ ಆದ್ದರಿಂದ ಮಾರ್ಚ್ 2003ನೇ ಇಸವಿಯೊಳಗೆ ಮುಗಿಸುವುದಕ್ಕೆ ಆಗುತ್ತದೆಯೇ ಎನ್ನತಕ್ಕಂಥ ಮಾತನ್ನು ಈ ಸದನದ ಮುಂದೆ ಹೇಳಬೇಕು

ಶ್ರೀ ವೀರಕುಮಾರ್ ಪಾಟೀಲ್ ಅಪ್ಪಾನ್ಲೋ ಮುಂದಿನ ತಿಂಗಳು ಸದರಿ ಕೆಲಸಕ್ಕೆ ಸಂಬಂಧವಟ್ಟಂತೆ ಆರ್ಡರ್ ಇಶ್ಯೂ ಮಾಡಲಾಗುತ್ತದೆ ಒಟ್ಟಿನಲ್ಲಿ ಮಾರ್ಚ್ 2003ನೇ ಇಸವಿಯೊಳಗೆ ಖಂಡಿತವಾಗಿ ಮುಗಿಸಲಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ

ಅಧ್ಯಕ್ಷರು ಈಗ ಪ್ರಶ್ನೋತ್ತರ ವೇಳೆ ಮುಗಿಯಿತು ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ' ಉತ್ತರಗಳು

ಶ್ರೀ ಡಿ ಬಿ ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) 22-01-2002ರಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಒಟ್ಟು 168 ಪ್ರಶ್ನೆಗಳ ಪೈಕಿ 102 ಪ್ರಶ್ನೆಗಳಿಗೆ ಸಂಬಂಧಪಟ್ಟಂತಹ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು * ಮಂಡಿಸಲಾಯಿತು *

---

* ಅನುಬಂಧ - I